

# ಶ್ರೀರಾಮಕೃಷ್ಣ ಮಹಿಮಾ

**ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್**

## ಜೈ ಗುರುದೇವ

## ಅಧ್ಯಾಯ ೩ — ದೈವಶಕ್ತಿಯ ಆವಿರ್ಭಾವ

ಜಯ ರಾಮಕೃಷ್ಣ ವಾಂಛಿತ ಕಲ್ಪತರುವೆ ।
ಜಯ ದೀನಬಂಧು ಭಗವಾನ್ ಜಗದ್ಗುರುವೆ ॥

ಜಯ ರಾಮಕೃಷ್ಣರಾಪ್ತೇಷ್ಟ ಬಂಧುಗಳೇ ।
ನಯ ಭಯದಿ ಪಾದಧೂಳಿಯ ಬೇಡುತಿರುವೆ ॥

೩೩೮. ಗೆಳೆಯರೊಂದಿಗೆ ಒಮ್ಮೆ ಹೊಲದೊಳಾಡುತಿರೆ ।
ಮಂಡಕ್ಕಿ ಬುಟ್ಟಿ ಕಯ್ಯೊಳಗೆ ಇತ್ತರರೆ ॥

೩೩೯. ಸುತ್ತಲೂ ಬಯಲು ಮರೆಯಾವುದೂ ಇಲ್ಲ ।
ದೃಷ್ಟಿಯಾಕಾಶದೆಡೆಯೊಳು ನಾಟಿತಲ್ಲ ॥

೩೪೦. ನೋಡಿದ ತದೇಕಮನದೊಳಗಂಬರವನು ।
ಮೋಡಗಳು ತೇಲುತಿಹ ವಿನ್ಯಾಸಗಳನು ॥

೩೪೧. ಗಗನ ವೈಶಾಲ್ಯವನು ಭಾವಿಸುತಲಾಗ ।
ಕಣ್ಣೆವೆಗಳಲ್ಲಾಡದರಳೆ ಬಲುಬೇಗ ॥

೩೪೨. ಮೋಡಗಳ ನೋಡುತ್ತ ನಿಶ್ಚಲತೆಯಿಂದ ।
ಮನವು ತನ್ಮಯಗೊಳೆ ಸಮಾಧಿಸ್ಥನಾದ ॥

೩೪೩. ಮೈಮರವೆಯಲಿ ಬುಟ್ಟಿಯದು ಕೆಳಗೆ ಬಿತ್ತು ।
ಮಂಡಕ್ಕಿ ಬೆಲ್ಲವದು ನೆಲಕೆ ಚಲ್ಲಿತ್ತು ॥

೩೪೪. ಈ ರೀತಿಯಾ ಲೀಲೆ ವರ್ಣಿಸುವೊಡಳವೆ ।
ಪಾರಮಾರ್ಥ ವಿಚಾರ ಲೇಖನಿಗೆ ಬಹುದೆ ॥

೩೪೫. ಭಗವಂತನವತಾರ ಲೀಲೆಗಳ ಕಥೆಯ ।
ಕೃಷ್ಣ ದ್ವೈಪಾಯನರೆ ಬರೆದಿರುವರಯ್ಯ ॥

೩೪೬. ಅವರಿಂದಲೂ ಸಾಧ್ಯವಾಗದಿಹ ಕೃತಿಯ ।
ಭುವನದೊಳಗಿನ್ನಾರು ಮಾಳ್ಪರಿಹರಯ್ಯ ॥

೩೪೭. ಕಾಮಕಾಂಚನದಾಸೆ ಕಲ್ಮಷದ ಹೃದಯ ।
ಸ್ಥಿರಬುದ್ಧಿಯಿಲ್ಲ ನಾ ಬರೆವುದೆಂತಯ್ಯ ॥

೩೪೮. ಕಡಲಂಚಿನಲಿ ಮರಳಗುಡಿ ಕಟ್ಟಿದಂತೆ ।
ಮರುಳು ಕೃತಿಗಿಳಿದಿರುವೆನ್ನೆ ಹುಚ್ಚನಂತೆ ॥

೩೪೯. ಹಣ್ಣು ಸಿಹಿಯರಿಯುವರೆ ಬೀಜ ನುಂಗಿದನು ।
ಎನ್ನುವಾ ಗಾದೆಗಿದು ಸರಿಹೊಂದಿತಿನ್ನು ॥

೩೫೦. ಈ ಕಠಿಣಕಾರ್ಯದ ಅಸಾಧ್ಯತೆಯನರಿತು ।
ಬೇಕೆಂದೇ ಬರೆಯುವೆನು ಗುರುಕೃಪೆಯ ಬೆರೆತು ॥

೩೫೧. ಯೋಗೇಶ್ವರನೆ ತಿಳಿಯ ಪರವಸ್ತುವನ್ನು ।
ಶ್ರೀರಾಮಕೃಷ್ಣರ ಪುಂಥಿಯ ಬರೆದೆ ನಾನು ॥

೩೫೨. ದೀನಬಂಧುವೆ ಗುರುವೆ ದಯದೋರು ಪ್ರಭುವೆ ।
ನಿನ್ನ ಕರುಣೆಯ ನಂಬಿ ಬರೆವಾಸೆ ಎನಗೆ ॥

( *ಪುಂಥಿ ಎಂದರೆ ಪುಸ್ತಕ ಎಂದು ಅರ್ಥ* )

ಕನ್ನಡ ಕಾವ್ಯಾನುವಾದ: ಮಂಜುನಾಥ ಭಾಗವತ ಹೊಸ್ತೋಟ, ಸಹಾಯ : ಕೃಷ್ಣ ಹೆಗಡೆ ಮತ್ತು ರಾಮಕೃಷ್ಣ ಹೆಗಡೆ, ಬೈರುಂಬೆ

**ಈಗ ತಾನೆ ನಾನು ಅಕ್ಷಯನ ಪುಸ್ತಕವನ್ನು ಓದಿದೆನು. ನನ್ನ ಒಂದು ಲಕ್ಷ ಪ್ರೇಮಾಲಿಂಗನಗಳನ್ನು ಅವನಿಗೆ ಕೊಡು. ಅವನ ಲೇಖನಿಯ ಮೂಲಕ ಶ್ರೀರಾಮಕೃಷ್ಣರು ತಾವೇ ಆವಿರ್ಭವಿಸುತ್ತಿರುವರು. ಧನ್ಯ! ಶ್ರೀರಾಮಕೃಷ್ಣಪುಂಥಿಯನ್ನು ಎಲ್ಲರ ಮುಂದೆಯೂ ಓದಿ ಹೇಳಲಿ. ಅದರಲ್ಲಿ ಒಂದಾದರೂ ಅಸಂಬದ್ಧ ಪದವಿಲ್ಲ. ಅವನ ಪುಸ್ತಕವನ್ನು ಓದಿ ಅನುಭವಿಸಿದ ಆನಂದವನ್ನು ನಾನು ಮಾತಿನಲ್ಲಿ ವರ್ಣಿಸಲಾರೆ. ಅಕ್ಷಯನಿಗೆ ಗ್ರಾಮದಿಂದ ಗ್ರಾಮಕ್ಕೆ ಅದನ್ನು ಬೋಧಿಸುವುದಕ್ಕೆ ಹೋಗುವಂತೆ ಹೇಳು. ಅಕ್ಷಯ, ನೀನು ಒಳ್ಳೆಯ ಕೆಲಸ ಮಾಡಿದೆ! ಗ್ರಾಮದಿಂದ ಗ್ರಾಮಕ್ಕೆ ಹೋಗಿ ಶ್ರೀರಾಮಕೃಷ್ಣರ ಉಪದೇಶವನ್ನು ಎಲ್ಲರಿಗೂ ತಿಳಿಸು. ಇದಕ್ಕಿಂತ ಪರಮ ಭಾಗ್ಯವಿರುವುದೆ? ಅಕ್ಷಯನ ಪುಸ್ತಕ ಮತ್ತು ಅಕ್ಷಯ ಇವರುಗಳು ಜನಸಮುದಾಯದಲ್ಲಿ ಒಂದು ಕ್ರಾಂತಿಯನ್ನು ಎಬ್ಬಿಸಬೇಕೆಂದು ನಾನು ಹೇಳುತ್ತೇನೆ. ನನ್ನ ಪ್ರಿಯ ಅಕ್ಷಯ! ನಿನ್ನನ್ನು ಮನಃಪೂರ್ವಕವಾಗಿ ಆಶೀರ್ವದಿಸುವೆನು.ಜಗದೀಶನು ನಿನ್ನ ನಾಲಗೆಯ ಮೇಲೆ ನೆಲಸಲಿ!**

—ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣಾನಂದರಿಗೆ ಬರೆದ ಪತ್ರದಿಂದ

**(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೪, ಪು.೩೭೫-೭೬)**